2. ರಾಮಕೃಷ್ಣನ ಜಾಣತನ



ಹಿಂದಕ್ಕೆ ವಿಜಯನಗರ ಎಂಬ ರಾಜ್ಯವಿತ್ತು. ಅದನ್ನು ಶ್ರೀಕೃಷ್ಣದೇವರಾಯನು ಆಳುತ್ತಿದ್ದನು. ಅವನ ಓಲಗದಲ್ಲಿ ಪಂಡಿತರು, ಕವಿಗಳು ಇದ್ದರು.

ಒಂದು ದಿನ ಓಲಗ ನಡೆದಿತ್ತು. ಆಗ ಒಬ್ಬ ಹೊರ ರಾಜ್ಯದ ಪಂಡಿತನು ಅಲ್ಲಿಗೆ ಬಂದನು. ದೊರೆಗಳೆ, ನಾನು ಅನೇಕ ಭಾಷೆಗಳನ್ನು ಬಲ್ಲೆನು. ನಿಮ್ಮ ಓಲಗದಲ್ಲಿ ದೊಡ್ಡ ಪಂಡಿತರು ಇದ್ದಾರೆ. ಅವರು ನನ್ನ ಮಾತೃಭಾಷೆಯನ್ನು ಕಂಡುಹಿಡಿಯಬಲ್ಲರೆ ? ಎಂದು ಕೇಳಿದನು.

ಶ್ರೀಕೃಷ್ಣದೇವರಾಯನು ತನ್ನ ಪಂಡಿತರ ಕಡೆಗೆ ನೋಡಿದನು. ಪಂಡಿತನ ಪ್ರಶ್ನೆಗೆ ಯಾರೂ ಉತ್ತರ ಕೊಡುವಂತೆ ಕಾಣಲಿಲ್ಲ. ಅಷ್ಟರಲ್ಲಿ ತೆನ್ನಾಲಿ ರಾಮಕೃಷ್ಣನು ಎದ್ದು ನಿಂತನು. ಪ್ರಭು, ಇಂದು ರಾತ್ರಿ ಪಂಡಿತನಿಗೆ ಸೊಗಸಾದ ಭೋಜನವನ್ನು ಮಾಡಿಸಲು ಹೇಳಿರಿ. ಅವರು ಊಟ ಮಾಡಿ ಇಲ್ಲಿಯೇ ಮಲಗಲಿ. ನಾಳೆ ನಾನು ಅವನ ಮಾತೃಭಾಷೆಯನ್ನು ಪತ್ತೆ ಮಾಡಿ ಹೇಳುವೆ, ಎಂದು ತಿಳಿಸಿದನು.

ಪಂಡಿತನು ರಾತ್ರಿ ಸೊಗಸಾದ ಊಟ ಮಾಡಿದನು. ಅವನು ಮೆತ್ತನೆಯ ಹಾಸಿಗೆಯ ಮೇಲೆ ಮಲಗಿದನು. ಪಂಡಿತನಿಗೆ ಗಾಢವಾದ ನಿದ್ರೆ ಹತ್ತಿತು.

ಮಧ್ಯರಾತ್ರಿ ಒಂದು ಗಂಟೆಯ ಸಮಯ. ರಾಮಕೃಷ್ಣನು ಒಂದು ಕೋಲನ್ನು ಹಿಡಿದುಕೊಂಡು ಬಂದನು. ಪಂಡಿತನ ಹೊಟ್ಟೆಯ ಮೇಲೆ ಸ್ವಲ್ಪಜೋರಾಗಿ ಉಜ್ಜಿದನು. ನಿದ್ರೆಯಲ್ಲಿದ್ದ ಪಂಡಿತನು ಗಾಬರಿಯಿಂದ ಎವರಡಾ ಅದಿ? (ಯಾರೋ ಅದು) ಎಂದು ಕೂಗಿದನು.

ರಾಮಕೃಷ್ಣನು ಅಲ್ಲಿಂದ ಮೆಲ್ಲನೆ ಹೊರ ಬಂದನು. ಪಂಡಿತನ ಗುಟ್ಟು ತಿಳಿದುಕೊಂಡನು. ನಿಶ್ಚಿಂತೆಯಿಂದ ಮನೆಯ ಕಡೆಗೆ ಸಾಗಿದನು.

ಮಾರನೆಯ ದಿನ ಪಂಡಿತನು ಕೃಷ್ಣದೇವರಾಯನ ಓಲಗಕ್ಕೆ ಒಂದನು. ಅದೇ ಸವಾಲನ್ನು ಹಾಕಿದನು. ರಾಮಕೃಷ್ಣನು ಎದ್ದು ನಿಂತು, ಪಂಡಿತನ ಮಾತೃಭಾಷೆ ತೆಲುಗು ಎಂದು ತಿಳಿಸಿದನು. ಈ ಮಾತನ್ನು ಕೇಳಿ ಪಂಡಿತನಿಗೆ ಆಶ್ಚರ್ಯವಾಯಿತು. ತನಗಿಂತ ಬುದ್ಧಿವಂತ ಪಂಡಿತರು ಇಲ್ಲಿದ್ದಾರೆ ಎಂದುಕೊಂಡನು. ಅವನು ತಲೆ ತಗ್ಗಿಸಿಕೊಂಡು ಓಲಗದಿಂದ ಹೊರಟು ಹೋದನು.

ಶಬ್ದಗಳ ಅರ್ಥ

ಓಲಗ – ಸಭೆ ; ಪಂಡಿತ – ವಿದ್ವಾಂಸ ; ಭೋಜನ – ಊಟ ; ಮಾತೃಭಾಷೆ – ತಾಯಿಭಾಷೆ ;

ಗುಟ್ಟು – ರಹಸ್ಯ

- ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥ ಹುಡುಕಿ ಬರೆಯಿರಿ.

ಪ್ರಭು – ..... ; ಗಾಢ – ..... ; ಪತ್ತೆ – .....

ಅಭ್ಯಾಸ

ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ವಿಜಯನಗರ ಸಾಮ್ರಾಜ್ಯವನ್ನು ಆಳಿದ ಪ್ರಸಿದ್ಧ ದೊರೆ ಯಾರು?

ಉತ್ತರ .....

ಆ) ಓಲಗದಲ್ಲಿ ಹೊರ ರಾಜ್ಯದ ಪಂಡಿತನು ರಾಜನಿಗೆ ಏನೆಂದು ಕೇಳಿದನು ?

ಉತ್ತರ .....

ಪ್ರಶ್ನೆ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.

ಅ) .....

ಉತ್ತರ .....

ಆ) .....

ಉತ್ತರ .....

ಪ್ರಶ್ನೆ 3) ಕೆಳಗಿನ ಬಿಟ್ಟ ಸ್ಥಳಗಳಲ್ಲಿ ಯೋಗ್ಯ ಪದಗಳನ್ನು ತುಂಬಿರಿ.

ಅ) ದೊರೆಗಳೆ ನಾನು ಅನೇಕ ..... ಗಳನ್ನು ಬಲ್ಲೆನು.

ಆ) ರಾಮಕೃಷ್ಣನು ಒಂದು ..... ನ್ನು ಹಿಡಿದುಕೊಂಡು ಬಂದನು.

ಇ) ..... ಹೊಟ್ಟೆಯ ಮೇಲೆ ಸ್ವಲ್ಪ ಜೋರಾಗಿ ಉಜ್ಜಿದನು.

ಈ) ಪಂಡಿತನ ಮಾತೃಭಾಷೆ ..... ಇತ್ತು.

ಪ್ರಶ್ನೆ 4) ಕೆಳಗಿನ ಶಬ್ದಗಳಿಗೆ ಅರ್ಥ ಹೇಳಿ ವಾಕ್ಯದಲ್ಲಿ ಉಪಯೋಗಿಸಿರಿ.

1) ಸೊಗಸಾದ = ...

ವಾಕ್ಯ .....

2) ದೊರೆ = ...

ವಾಕ್ಯ .....

ಪ್ರಶ್ನೆ 5) ಶ್ರೀ ಕೃಷ್ಣದೇವರಾಯನು ಆಳಿದ ಗತವೈಭವದ ಹಂಪೆಯ ಕುರಿತು ಒಂದು ಚಿಕ್ಕ ಟಿಪ್ಪಣಿ ಬರೆಯಿರಿ.

.....

.....

.....

.....

.....

.....

ಉಪಕ್ರಮ : ಶಿಕ್ಷಕರ ಸಹಾಯದಿಂದ ಹಂಪೆಯ ಪ್ರವಾಸ ಕೈಕೊಳ್ಳಿರಿ.